

dens by the bay

# ಸಿಂಗಪುರದಲ್ಲಿ ‘ಸಾರ್ವಕಾಲಿಕ ವಸಂತ ಋತು’



ಸಿಂಗಪುರದ ಕೇಂದ್ರ ಭಾಗದಲ್ಲಿರುವ ‘ಗಾರ್ಡನ್ಸ್ ಬೈ ದಿ ಬೇ’ ಹೂ ಮತ್ತು ಹಸಿರಿನ ಅಪೂರ್ವ ಸಿರಿಸಮೃದ್ಧಿಯನ್ನು ಹೊಂದಿರುವ ಉದ್ಯಾನಗಳ ಗುಚ್ಛ.

■ ಟಿ. ಗುರುರಾಜಾಚಾರ್ ಜಹಗಿರ್‌ದಾರ್

ಮೂರು ದಶಕಗಳ ಅವಧಿಯಲ್ಲಿ ಸಮುದ್ರದಿಂದ ಹಿಂಪಡೆದ ಭೂಮಿಯನ್ನು ಎತ್ತರಿಸಿ ಗಟ್ಟಿಯಾಗಿಸಿದಾಗ ಜನ್ಮತಾಳಿದ್ದೇ ‘ಗಾರ್ಡನ್ಸ್ ಬೈ ದ ಬೇ’. ಇದು ಉದ್ಯಾನಗಳ ಬೃಹತ್ ಸಮುಚ್ಚಯ. ಸಿಂಗಪುರದ ಮರೀನಾ ಕೊಲ್ಲಿಯ ದಡದಲ್ಲಿ ಮೈದಾಳಿ ನಿಂತಿದೆ.

101 ಹೆಕ್ಟೇರ್ ಪ್ರದೇಶವನ್ನು ಇದು ಆವರಿಸಿದೆ. ದೇಶದ ಒಳಗಿರುವ 300ಕ್ಕಿಂತಲೂ ಹೆಚ್ಚು ಗಾರ್ಡನ್‌ಗಳ ಒಟ್ಟು ವಿಸ್ತೀರ್ಣಕ್ಕಿಂತ ಇದರ ವಿಸ್ತೀರ್ಣ ದೊಡ್ಡದು. ಎರಡು ಡೋಮ್, ಹದಿನೆಂಟು ಸೂಪರ್ ಟ್ರೀ ಹಾಗೂ ನಾಲ್ಕು ತೋಟಗಳು ಹಾಗೂ ಒಂದೆರಡು ಲೇಕ್‌ಗಳು ಇಲ್ಲಿ ಕಾಣುವ ವೈವಿಧ್ಯ. ಈ ಸಮುಚ್ಚಯ ನಿರ್ಮಾಣ